# ವಾಯುಪಡೆಯ ನಾರಿಶಕ್ತಿ




ದೇಶದ ಯುದ್ಧ ವಿಮಾನದ ಮೊದಲ ಮಹಿಳಾ ಪೈಲಟ್‌ಗಳಲ್ಲಿ ಒಬ್ಬರಾದ ಫ್ಲೈಟ್ ಲೆಫ್ಟಿನೆಂಟ್ ಭಾವನಾ ಕಾಂತ್ ಅವರು ಕಳೆದವಾರ ನಡೆದ ಗಣರಾಜ್ಯೋತ್ಸವದಲ್ಲಿ ಹೊಸ ಇತಿಹಾಸವೊಂದನ್ನು ಬರೆದರು. ಹೌದು, ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಪಾಲ್ಗೊಂಡ ಯುದ್ಧ ವಿಮಾನದ ಮೊದಲ ಮಹಿಳಾ ಪೈಲಟ್ ಎಂಬ ಹಿರಿಮೆಗೆ ಅವರು ಪಾತ್ರರಾದರು.

ಭಾರತೀಯ ವಾಯುಪಡೆಯ ಹೆಮ್ಮೆಯ ಯುದ್ಧ ವಿಮಾನ 'ತೇಜಸ್' ಹಾಗೂ ಹೆಲಿಕಾಪ್ಟರ್ 'ರುದ್ರ' ಇದ್ದ ಸ್ತಬ್ಧಚಿತ್ರದ ಜತೆ ಅವರು ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಪಾಲ್ಗೊಂಡಿದ್ದರು. ಬಿಕಾನೇರ್‌ನ ರಾಷ್ಟ್ರೀಯ ಬಾಹ್ಯಾಕಾಶ ಪ್ರಯೋಗಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾವನಾ, ಯುದ್ಧ ವಿಮಾನದ ಮೂಲಕ ಕಾರ್ಯಾಚರಣೆ ನಡೆಸುವ (ಹಗಲಿನ ಹೊತ್ತು) ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದವರು. ಯುದ್ಧ ವಿಮಾನ 'ಮಿಗ್–21' ಅನ್ನು ಒಬ್ಬರೇ ಯಶಸ್ವಿಯಾಗಿ ಹಾರಿಸಿ, ಕಾರ್ಯಾಚರಣೆಯ ಪಟ್ಟುಗಳನ್ನೂ ಪ್ರದರ್ಶಿಸಿ ಸೈ ಎನಿಸಿಕೊಂಡವರು. ಈಗ ರಾತ್ರಿ ಯುದ್ಧ ಕಾರ್ಯಾಚರಣೆ ತಂತ್ರಗಳನ್ನು ಕಲಿಯುವಲ್ಲಿ ನಿರತರು.

ಭಾವನಾ ಅವರ ಜತೆ ಅವನಿ ಚತುರ್ವೇದಿ, ಮೋಹನಾ ಸಿಂಗ್ ಅವರೂ ಯುದ್ಧ ವಿಮಾನ ಹಾರಿಸುವ ತರಬೇತಿಗೆ ಒಳಗಾದ ಮೊದಲ ಮಹಿಳಾ ತಂಡದಲ್ಲಿದ್ದರು. ಆದರೆ, ತರಬೇತಿಯನ್ನು ಮೊದಲು ಯಶಸ್ವಿಯಾಗಿ ಪೂರೈಸಿದವರು ಮಾತ್ರ ಭಾವನಾ. ಲಾಗಾಯ್ತಿನಿಂದಲೂ ವಾಯುಪಡೆಯ ಯುದ್ಧ ಕಾರ್ಯಾಚರಣೆಯಲ್ಲಿ ಮಹಿಳೆಯರಿಗೆ ಅವಕಾಶವೇ ಇರಲಿಲ್ಲ. ಆದರೆ, ಈ ಕಾರ್ಯಾಚರಣೆಯಲ್ಲಿ ಮಹಿಳೆಯರಿಗೂ ಅವಕಾಶ ಮಾಡಿಕೊಡಬೇಕು ಎಂದು ತೀರ್ಮಾನಿಸಿದ ಸರ್ಕಾರ, 2016ರ ಜುಲೈನಲ್ಲಿ ಅದಕ್ಕೆ ಪ್ರಾಯೋಗಿಕವಾಗಿ ಅವಕಾಶದ ಬಾಗಿಲನ್ನು ತೆರೆಯಿತು. 2017ರ ನವೆಂಬರ್‌ನಲ್ಲಿ ಈ ಮೂವರೂ ಮಹಿಳೆಯರು ಯುದ್ಧ ವಿಮಾನದ ದಂಡನಾಯಕಿಯರಾಗಿ ನೇಮಕಗೊಂಡರು.

ಭಾವನಾ, ಬಿಹಾರ ಮೂಲದವರು. ಅಲ್ಲಿನ ಬೆಗುಸರಾಯ್ ಜಿಲ್ಲೆಯ ಬರೌನಿ ಪಟ್ಟಣದವರು. ಅವರ ತಂದೆ ತೇಜ್ ನಾರಾಯಣ್ ಕಾಂತ್ ಭಾರತೀಯ ತೈಲ ನಿಗಮದಲ್ಲಿ ಎಂಜಿನಿಯರ್ ಆಗಿದ್ದಾರೆ. ಅಂದಹಾಗೆ, ವಾಯುಪಡೆಯ ಈ ಹೆಮ್ಮೆಯ ಸಾಧಕಿಗೂ ನಮ್ಮ ಬೆಂಗಳೂರಿಗೂ ನಂಟಿದೆ. ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲಿ ಮೆಡಿಕಲ್ ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಅವರು ಎಂಜಿನಿಯರಿಂಗ್ ಪದವೀಧರರು. ಓದು ಮುಗಿಸಿದ ಮೇಲೆ ಟಾಟಾ ಕನ್ಸಲ್ಟನ್ಸಿ ಸರ್ವೀಸಸ್‌ನಲ್ಲಿ ಉದ್ಯೋಗ ಗಿಟ್ಟಿಸಿದ ಅವರು, ಬಳಿಕ ಅಲ್ಲಿಂದ ವಾಯುಪಡೆಗೆ ಹಾರಿದರು.

ಶಾಲೆಯಲ್ಲಿ ಓದುತ್ತಿದ್ದಾಗ ಭಾವನಾಗೆ ಕ್ರೀಡೆಯ ಮೇಲೆ ತುಂಬಾ ಪ್ರೀತಿ. ಕೊಕ್ಕೊ, ಬ್ಯಾಡ್ಮಿಂಟನ್, ವಾಲಿಬಾಲ್ ಕ್ರೀಡೆಗಳೆಂದರೆ ಅವರಿಗೆ ಪಂಚಪ್ರಾಣ. ಈಜುಕೊಳದಲ್ಲೂ ಗಂಟೆಗಟ್ಟಲೆ ಕಾಲ ಕಳೆದವರು. ಸಾಹಸ ಕ್ರೀಡೆಗಳಲ್ಲೂ ಒಂದು ಕೈ ನೋಡುವ ಉತ್ಸಾಹ. ಓದಿನಲ್ಲಿ ಸಹ ಮುಂದಿದ್ದ ಅವರು, ಹತ್ತನೇ ತರಗತಿಯಲ್ಲಿ ಶೇ 90ಕ್ಕಿಂತ ಅಧಿಕ ಅಂಕ ಗಳಿಸಿ ತೇರ್ಗಡೆಯಾಗಿದ್ದರು. ಫೋಟೊಗ್ರಫಿ, ಪೇಂಟಿಂಗ್‌ನಲ್ಲೂ ಅವರಿಗೆ ವಿಶೇಷ ಆಸಕ್ತಿ. ಮಾಡೆಲಿಂಗ್ ಕ್ಷೇತ್ರದ ಕುರಿತೂ ತಲೆ ಕೆಡಿಸಿಕೊಂಡಿದ್ದ ಆಕೆ, ಹಲವು ಜಾಹೀರಾತುಗಳಲ್ಲೂ ಕಾಣಿಸಿಕೊಂಡಿದ್ದರು. ಕಾಲೇಜು ದಿನಗಳಲ್ಲೇ ರಾಯಲ್ ಎನ್‌ಫೀಲ್ಡ್ ಏರಿ, ದೂರ ಪ್ರಯಾಣ ಮಾಡುವುದೆಂದರೆ ಭಾವನಾಗೆ ಎಲ್ಲಿಲ್ಲದ ಉಮೇದಿ. ಇಷ್ಟೆಲ್ಲ ಆಸಕ್ತಿ, ಅಭಿರುಚಿಗಳ ಮಧ್ಯೆ ಬಿಡುವು ಮಾಡಿಕೊಂಡು ರುಚಿಯಾದ ಖಾದ್ಯಗಳನ್ನು ತಯಾರಿಸುವಲ್ಲೂ ಆಕೆ ಸಿದ್ಧಹಸ್ತರಂತೆ!

ಶಾಲಾ ದಿನಗಳಿಂದಲೂ ವಿಮಾನದಲ್ಲಿ ಹಾರುವ ಭಾವನಾ ಲೋಕದಲ್ಲಿ ತೇಲುತ್ತಿದ್ದ ಅವರು, ವಾಯುಪಡೆಯನ್ನು ಸೇರುವ ಹಾದಿಯ ಹುಡುಕಾಟದಲ್ಲಿದ್ದರು. ವಾಯುಪಡೆಯ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾದ ಬಳಿಕ ಹೈದರಾಬಾದ್‌ನಲ್ಲಿ ವಿಮಾನ ಹಾರಿಸುವ ತರಬೇತಿಯನ್ನು ಪಡೆದರು. ಅಲ್ಲಿಂದ ಫ್ಲೈಯಿಂಗ್ ಆಫೀಸರ್ ಆಗಿ ನೇಮಕಗೊಂಡ ಅವರು ದುಂಡಿಗಲ್‌ನ ವಾಯುಪಡೆ ಅಕಾಡೆಮಿಯಲ್ಲಿ ಕಾರ್ಯನಿರ್ವಹಿಸಿದರು.

ತಮ್ಮ ಮೊದಲ ಏಕಾಂಗಿ ವಿಮಾನ ಹಾರಾಟದ ಅನುಭವವನ್ನು ಅವರು ಖುಷಿಯಿಂದ ನೆನಪು ಮಾಡಿಕೊಳ್ಳುವುದುಂಟು. 'ನಾನು ಮೊದಲು ಏಕಾಂಗಿಯಾಗಿ ಹಾರಿಸಿದ್ದು 'ಕಿರಣ್' ಯುದ್ಧ ವಿಮಾನವನ್ನು. 20 ಸಾವಿರ ಅಡಿ ಎತ್ತರದಲ್ಲಿ ನಾನು 'ಕಿರಣ್'ನನ್ನು ಕೊಂಡೊಯ್ದಿದ್ದೆ. ಮೇಲೆ ಗಿರಕಿ ಹೊಡೆಸುವಾಗ ಏನಾದರೂ ಅನಾಹುತವಾದರೆ ಹೇಗೆ ಎಂಬ ಆತಂಕ ಕಾಡಿತ್ತು' ಎಂದು ನಗುತ್ತಾ ಹೇಳುತ್ತಾರೆ.

ಯುದ್ಧ ವಿಮಾನದಲ್ಲಿ ಮಹಿಳಾ ಪೈಲಟ್‌ಗಳಿಗೂ ಅವಕಾಶ ತೆರೆದಾಗ ಭಾವನಾ ಹಿರಿಹಿರಿ ಹಿಗ್ಗಿದ್ದರು. ಆ ಗುರುತರ ಹೊಣೆ ನಿಭಾಯಿಸಲು ಆಯ್ಕೆಯಾದ ಮೊದಲಿಗರಲ್ಲಿ ಇವರೂ ಒಬ್ಬರಾದರು. ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಂದ 'ನಾರಿ ಶಕ್ತಿ' ಪುರಸ್ಕಾರವನ್ನೂ ಪಡೆದಿರುವ ಭಾವನಾ, ದೇಶದ ಸ್ತ್ರೀಶಕ್ತಿಯ ಪ್ರತೀಕ. ಭಾವನಾ ಅವರ ತಂದೆ ತೇಜ್ ನಾರಾಯಣ್ ಸಹ ದಶಕಗಳ ಹಿಂದೆ ವಾಯುಪಡೆಗೆ ಆಯ್ಕೆ ಆಗಿದ್ದರಂತೆ. ಆದರೆ, ನಾರಾಯಣ್ ಅವರ ತಂದೆ ಅನುಮತಿ ನೀಡದ ಕಾರಣ ವಾಯುಪಡೆ ಸೇರಬೇಕೆಂಬ ಅವರ ಕನಸು ಕೈಗೂಡಿರಲಿಲ್ಲ. ಈಗ ಮಗಳ ಮೂಲಕ ತಮ್ಮ ಆ ಕನಸನ್ನು ನನಸು ಮಾಡಿಕೊಂಡಿದ್ದಾರೆ ಈ ಹೆಮ್ಮೆಯ ತಂದೆ.

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65